ಸಾಕ್ಷಿ ಯನ್ನು ದಿಃ 10.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ಆರೋಪಿಗೆ ನಾನು ಯವಾಗಲೂ ಖಾತೆ ಮೂಲಕ ಹಣ ನೀಡಿಲ್ಲ.
2. ಆರೋಪಿಯು ಸಹ ನಿಮ್ಮ ಖಾತೆಗೆ ಯಾವತ್ತೂ ಹಣ ಹಾಕಿಲ್ಲವಾ ಎಂದರೆ, ಸಂಘದ ದುಡ್ಡನ್ನು ಹಾಕಿರುತ್ತಾರೆ.
3. ಸಾಕ್ಷಿಗೆ ಒಂದು ದಾಖಲೆ ತೋರಿಸಿ, ಅದರಲ್ಲಿ ನಿಮ್ಮ ಬರವಣಿಗೆ ಇದೆಯಾ ಎಂದರೆ, ಇಲ್ಲ ಎಂದು ನುಡಿಯುತ್ತಾರೆ.
4. ದಿಃ 27.06.2024 ರಂದು 10 ಸಾವಿರ ಹಣವನ್ನು ನೀವು ಆರೋಪಿಯ ಯುಕೋ ಬ್ಯಾಂಕ್ ಖಾತೆಗೆ ಹಾಕಿದ್ದೀರಾ ಎಂದರೆ, ಸರಿಯಲ್ಲ. ನೀವು 20 ಸಾವಿರ ಹಣವನ್ನು ಸಾಲವಾಗಿ ಅವರಿಗೆ ನೀಡಿದ್ದು, ಸದರಿ 10 ಸಾವಿರ ಸಾಲದ ಹಣವಾಗಿರುತ್ತದೆ ಎಂದರೆ ಸರಿಯಲ್ಲ. ಉಳಿಕೆ 10 ಸಾವಿರ ಹಣವನ್ನು ಅವರ ತಾಯಿಗೆ ನಗದು ಮೂಲಕ ನೀಡಿದ್ದೀರಾ ಎಂದರೆ ಸರಿಯಲ್ಲ.
5. ಸದರಿ ಹಣವನ್ನು ಖಾತೆ ಮೂಲಕ ದಿಃ 16.07.2024 ರಂದು ಕಂತಿನ ಹಣ 600 ಹಣವನ್ನು ಹಾಕಿಸಿಕೊಂಡಿದ್ದೀರಾ ಎಂದರೆ, ಅದು ಸಂಘಕ್ಕೆ ಹಾಕಿರುವ ಹಣ ಎಂದು ನುಡಿಯುತ್ತಾರೆ.
6. ದಿಃ 21.07.2024 ರಲ್ಲಿ 600 ಹಣವನ್ನು ನಗದು ಮೂಲಕ ಕಟ್ಟಿಸಿಕೊಂಡಿದ್ದೀರಾ ಎಂದರೆ ಸರಿಯಲ್ಲ.
7. ದಿಃ 28.07.2024 ರಂದು ಖಾತೆ ಮೂಲಕ 2 ಸಾವಿರ ಹಣ ಹಾಕಿಸಿಕೊಂಡಿದ್ದೀರಾ ಎಂದರೆ, ಅಂದು ಸಂಘದ ಹಣ.
8. ದಿಃ 05.08.2024 ರಂದು 2 ಸಾವಿರ ನಗದು ಮೂಲಕ ಪಡೆದುಕೊಕಾಂಡಿದ್ದೀರಾ ಎಂದರೆ ಸರಿಯಲ್ಲ.
9. ದಿಃ 11.08.2024 ರಂದು 2 ಸಾವಿರದ 571 ಹಣ ಹಾಕಿಸಿಕೊಂಡಿದ್ದೀರಾ ಎಂದರೆ, ಅಂದು ಸಂಘದ ಹಣ.
10. ದಿಃ 20.08.2024 ರಂದು 574 ನಗದು ಹಣ ಪಡೆದಿದ್ದೀರಾ ಎಂದರೆ, ಸರಿಯಲ್ಲ.

11. ದಿಃ 01.09.2024 ರಂದು 1 ಸಾವಿರ ಪಡೆದುಕೊಂಡಿದ್ದೀರಾ ಎಂದರೆ ಸರಿಯಲ್ಲ. ಸದರಿ 1 ಸಾವಿರ ಹೊರತುಪಡಿಸಿ ಬೇರೆ ಎಲ್ಲಾ ಹಣವನ್ನು ಅವರ ತಾಯಿಗೆ ನೀಡಿದ ಸಾಲದ ಕಾರ್ಡಿನಲ್ಲಿ ನಮೂದು ಮಾಡಿದ್ದೀರಾ ಎಂದರೆ ಸರಿಯಲ್ಲ.
12. ಆರೋಪಿಯ ತಾಯಿಗೆ ನೀಡಿದ 20 ಸಾವಿರ ಸಾಲದ ಸಲುವಾಗಿ ನಿಪಿ - 1 ರ ಚೆಕ್ಕನ್ನು ಪಡೆದುಕೊಂಡಿದ್ದೀರಾ ಎಂದರೆ ಸರಿಯಲ್ಲ.
13. 20 ಸಾವಿರಕ್ಕೆ ಒಂದು ಸೊನ್ನೆಯನ್ನು ಸೇರಿ 2 ಲಕ್ಷ ಎಂದು ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ.
14. ಆರೋಪಿ ನಿಮ್ಮಿಂದ ಯಾವುದೇ ಸಾಲವನ್ನು ನಿಪಿ - 1 ಕ್ಕೆ ಸಂಬಂಧಿಸಿದಂತೆ ಪಡೆದಿಲ್ಲ ಎಂದರೆ ಸರಿಯಲ್ಲ.
15. ನಿಮ್ಮ ಹಾಗೂ ನಿಮ್ಮ ತಂದೆ ಹೆಸರು ಎರಡೂ ಸೇರಿಸಿ ಎಂ.ಕೆ ಎಂಬ ಲೋಗೋ ಮಾಡಿಸಿಕೊಂಡು ಫೈನಾನ್ಸ್ ನಡೆಸುತ್ತಿದ್ದೀರಾ ಎಂದರೆ ಸರಿಯಲ್ಲ.
16. ಆರೋಪಿಗೆ 2 ಲಕ್ಷ ಸಾಲ ಹಣ ನೀಡದೇ ಇದ್ದರೂ ಸುಳ್ಳು ದೂರು ಹಾಕಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ